ಖಾಲಿ ಇರುವ ಪೇದೆಗಳ ಹುದ್ದೆಗಳನ್ನು ಭರ್ತಿಮಾಡುವುದು

436(693) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ

ಅ) ಬೀದರ್ ಜಿಲ್ಲೆಯಲ್ಲಿನ ಠಾಣೆಗಳಲ್ಲಿ ಖಾಲಿ ಇರುವ ಪೊಲೀಸ್ ಕಾನ್ಸ್‌ಟೇಬಲ್‌ಗಳ ಹುದ್ದೆಗಳೆಷ್ಟು? (ವಿವರ ನೀಡುವುದು)

ಆ) ಬಹಳಷ್ಟು ಪೊಲೀಸ್ ಕಾನ್ಸ್‌ಟೇಬಲ್‌ಗಳ ಹುದ್ದೆ ಖಾಲಿ ಇರುವುದರಿಂದ ಜಿಲ್ಲೆಯಲ್ಲಿ ಕ್ರಿಮಿನಲ್ ಪ್ರಕರಣಗಳು ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಎಷ್ಟು ಕಾಲಮಿತಿಯೊಳಗೆ ಖಾಲಿ ಹುದ್ದೆಗಳನ್ನು ಭರ್ತಿಮಾಡಲಾಗುವುದು?

ಶ್ರೀ ಕೆ. ಜೆ. ಜಾರ್ಜ್ (ಮಾನ್ಯ ಗೃಹ ಸಚಿವರು)

ಅ) ಬೀದರ್ ಜಿಲ್ಲೆಯಲ್ಲಿನ ಠಾಣೆಗಳಲ್ಲಿ ಖಾಲಿ ಇರುವ ಪೊಲೀಸ್ ಕಾನ್ಸ್‌ಟೇಬಲ್ ಮತ್ತು ಮಹಿಳಾ ಪೊಲೀಸ್ ಕಾನ್ಸ್‌ಟೇಬಲ್‌ಗಳ ವಿವರ ಈ ಕೆಳಕಂಡಂತಿರುತ್ತದೆ.

ಕ್ರಸ	ಪೊಲೀಸ್ ಠಾಣೆಯ ಹೆಸರು	ಖಾಲಿ ಇರುವ ಕಾನ್ಸ್‌ಟೇಬಲ್ ಹುದ್ದೆಗಳ ಸಂಖ್ಯೆ
1	ಬೀದರ್ ಟೌನ್	6
2	ಎನ್.ಟಿ.ಪಿ.ಎಸ್. ಬೀದರ್	3
3	ಮಾರ್ಕೆಟ್	5
4	ಗಾಂಧಿ ಗುಂಜ್	10
5	ಬೀದರ್ ಗ್ರಾಮಾಂತರ	0
6	ಜನ್‌ವಾಡ	0
7	ಬಾಗ್‌ದಾಲ್	5
8	ಮನ್ನಳ್ಳಿ	10
9	ಬೀದರ್ ಟ್ರಾಫಿಕ್	5
10	ಹುಮ್ನಾಬಾದ್	4
11	ಹಳ್ಳಿ ಖೇಡ್	8

12	ಹುಮ್ನಾಬಾದ್ ಟ್ರಾಫಿಕ್	8
13	ಚಿಟ್‌ಗುಪ್ಪ	10
14	ಮನ್ನಖೇಳಿ	4
15	ಬೆಮೆಲ್ ಖೇಡ್	16
16	ಬಸವಕಲ್ಯಾಣ ಟೌನ್	1
17	ಬಸವಕಲ್ಯಾಣ ಟ್ರಾಫಿಕ್	4
18	ಹುಲಸೂರು	9
19	ಬಸವಕಲ್ಯಾಣ ಗ್ರಾಮಾಂತರ	3
20	ಮಂಠಾಳ	7
21	ಮುಡಬಿ	4
22	ಬಾಲ್ಕಿ ಗ್ರಾಮಾಂತರ	4
23	ಕೆ. ಚಿಂಚೋಳ್ಳಿ	8
24	ದನ್ನೂರು	3
25	ಬಾಲ್ಕಿ ಟೌನ್	3
26	ಔರಾದ್	7
27	ಹೋಕ್ರಾನ	17
28	ಸಂತಪುರ್	6
29	ಚಿಂಟಕಿ	7
30	ಕಮಲಾನಗರ್	5
31	ಕುಶನೂರು	4
ಒಟ್ಟು		**186**

ಆ) ಕ್ರಿಮಿನಲ್ ಪ್ರಕರಣಗಳು ಹೆಚ್ಚಾಗಿರುವುದಕ್ಕೆ ಮತ್ತು ಪೊಲೀಸ್ ಸಿಬ್ಬಂದಿ ಕೊರೆತೆಗೆ ನೇರವಾಗಿ ಸಂಬಂಧವನ್ನು ಕಲ್ಪಿಸಲಾಗದು. ಆದರೆ ಪ್ರಕರಣಗಳ ತನಿಖೆಗೆ ಮತ್ತು ಬಂದೋಬಸ್ತ್ ಕೆಲಸಕ್ಕೆ ಪೊಲೀಸ್ ಸಿಬ್ಬಂದಿ ಕೊರತೆ ಪರಿಣಾಮ ಬೀರುತ್ತದೆ ಎಂಬುದುದು ನಿಜ.

ಇ) ಇತ್ತೀಚಿಗೆ ಸರ್ಕಾರವು ಆದೇಶಿಸಿರುವ ಸಂವಿಧಾನದ ಅನುಚ್ಛೇಧ 371(ಜೆ)(2)ನ್ನು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಗೊಳಿಸಿದ ಕೂಡಲೇ ಜಿಲ್ಲೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿಮಾಡಲು ಕ್ರಮ ಕೈಗೊಳ್ಳವಾಗುವುದು.

ಬಾಕಿ ಉಳಿಸಿಕೊಂಡಿರುವ ತೆರಿಗೆ

437(694) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಬಾಲ್ಕಿ)

ಅ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಿಂದ ಖಾಸಗಿ ಹಾಗೂ ರಾಜ್ಯ ಮತ್ತು ಕೇಂದ್ರ ಸರ್ಕಾರದ ಸ್ವಾಮ್ಯದ ಸಾರ್ವಜನಿಕ ಉದ್ದಿಮೆಗಳು ಎಷ್ಟು ತೆರಿಗೆಯನ್ನು ಬಾಕಿ ಉಳಿಸಿಕೊಂಡಿವೆ(ವಿವರ ನೀಡುವುದು)

ಆ) ನ್ಯಾಯಲಯದ ಹಂತದಲ್ಲಿರುವ ಪ್ರಕರಣಗಳೆಷ್ಟು?

ಇ) ಈ ರೀತಿ ಬಾಕಿ ಉಳಿಸಿಕೊಂಡಿರುವ ತೆರಿಗೆಯನ್ನು ಶೀಘ್ರವಾಗಿ ವಸೂಲು ಮಾಡಲು ಸರ್ಕಾರ ತೆಗೆದುಕೊಂಡ ಕ್ರಮವೆನು?

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿ)

ಅ) ವಾಣಿಜ್ಯ ತೆರಿಗೆ ಇಲಾಖೆ ಖಾಸಗಿ ಹಾಗೂ ರಾಜ್ಯ ಮತ್ತು ಕೇಂದ್ರ ಸರ್ಕಾರದ ಸ್ವಾಮ್ಯದ ಸಾರ್ವಜನಿಕ ಉದ್ದಿಮೆಗಳು ಉಳಿಸಿರುವ ತೆರಿಗೆ ಬಾಕಿ ವಿವರಗಳನ್ನು ಪ್ರತ್ಯಕ್ಷವಾಗಿ ಇಡದೇ ಇದ್ದು, ಎಲ್ಲಾ ವರ್ತಕರು ಉದ್ದಿಮೆಗಳು ಮತ್ತಿತ್ತರ ಕರೆದಾತರ ಕಳೆದ 3 ವರ್ಷಗಳ ಅಂತ್ಯದಲ್ಲಿ ಉಳಿಸಿಕೊಂಡಿರುವ ವಾಣಿಜ್ಯ ತೆರಿಗೆ ಬಾಕಿ ವಿವರ ಕೆಳಗಿನಂತಿದೆ.

₹ ಕೋಟಿಗಳಲ್ಲಿ

2010–11: 2168.48

2011–12: 2262.74

2012–13: 3043.33